# ಭಗವಂತ ಕೊಡುತ್ತಾನೆ

■ ಕನ್ನಡಕ್ಕೆ: **ಸುಮಾ ಕಳಸಾಪುರ**
■ ಇಂಗ್ಲಿಷ್ ಮೂಲ: **ದಾಜಿ**
ಕಲೆ: ಸಂತೋಷ್ ಸಸಿಹಿತ್ಲು



ಬಹಳ ಹಿಂದೆ ಒಬ್ಬ ಪರೋಪಕಾರಿ ರಾಜ ಆಂಧ್ರಪ್ರದೇಶವನ್ನು ಆಳುತ್ತಿದ್ದನು. ಪ್ರತಿದಿನ ಅವನ ಆಸ್ಥಾನಕ್ಕೆ ಇಬ್ಬರು ಭಿಕ್ಷುಕರು ಬರುತ್ತಿದ್ದರು. ಅವರಿಗೆ ರಾಜ ಯಾವಾಗಲೂ ಊಟವನ್ನು ಕೊಟ್ಟು ಜೊತೆಗೆ ಹಣದ ರೂಪದಲ್ಲಿ ಭಿಕ್ಷೆಯನ್ನೂ ನೀಡುತ್ತಿದ್ದನು.

ಹಾಗೆ ಭಿಕ್ಷೆಯನ್ನು ಪಡೆದ ನಂತರ ಅವರಿಬ್ಬರಲ್ಲಿ ಹಿರಿಯನಾದ ಮುದುಕ, ಯಾವಾಗಲೂ 'ಏನೊಂದು ನಮಗೆ ಭಿಕ್ಷೆಯಾಗಿ ದೊರೆಯುತ್ತಿದೆಯೋ ಅದು ದೇವರು ಕೊಟ್ಟಿದ್ದು' ಎಂದು ದೇವರಿಗೆ ಧನ್ಯವಾದಗಳನ್ನು ಹೇಳುತ್ತಿದ್ದನು.

ಎರಡನೇ ಭಿಕ್ಷುಕ ಇನ್ನೂ ಯುವಕ. ಅವನು ಭಿಕ್ಷೆ ಪಡೆದು 'ನಾವೇನು ಭಿಕ್ಷೆಯಾಗಿ ತೆಗೆದುಕೊಳ್ಳುತ್ತಿದ್ದೇವೆ, ಅದು ರಾಜನ ಕೊಡುಗೆ' ಎಂದು ರಾಜನಿಗೆ ಧನ್ಯವಾದಗಳನ್ನು ಹೇಳುತ್ತಿದ್ದನು.

ರಾಜನಿಗೆ ಮುದುಕ ಹೇಳುವ ಮಾತು ಸ್ವಲ್ಪವೂ ಇಷ್ಟ ಆಗುತ್ತಿರಲಿಲ್ಲ. ಅವನ ಮಾತನ್ನು ಉಪೇಕ್ಷೆ ಮಾಡುತ್ತಿದ್ದನು. ಒಂದು ದಿನ ರಾಜನು ಅವರಿಬ್ಬರಿಗೂ ನಿತ್ಯಕ್ಕಿಂತ ಹೆಚ್ಚಿನ ಧನವನ್ನು ಕೊಟ್ಟನು. ಅದನ್ನು ನೋಡುತ್ತಲೇ, ಹಿರಿಯ ಭಿಕ್ಷುಕ ಎಂದಿನಂತೆ ದೇವರಿಗೆ ಧನ್ಯವಾದಗಳನ್ನು ತುಂಬಾ ಸಂತೋಷ ಮತ್ತು ಉತ್ಸಾಹದಿಂದ ಹೇಳಲು ಪ್ರಾರಂಭಿಸಿದ, 'ನಾವು ಏನೆಲ್ಲಾ ಪಡೆಯುತ್ತೇವೆಯೋ ಅದು ದೇವರ ಭಿಕ್ಷೆ' ಎಂದು ಕೃತಜ್ಞತೆ ಸಲ್ಲಿಸಿದ.

ಈ ಬಾರಿ ರಾಜ ಆ ಹಿರಿಯ ಭಿಕ್ಷುಕನ ಮಾತನ್ನ ನಿರ್ಲಕ್ಷ್ಯ ಮಾಡಲಿಲ್ಲ. ತನಗೆ ತಾನೇ ಯೋಚಿಸಿ, 'ನಾನು ಎಷ್ಟೇ ಹಣ ಈ ಭಿಕ್ಷುಕನಿಗೆ ಕೊಟ್ಟರೂ ಇವನು ದೇವರಿಗಷ್ಟೇ ಧನ್ಯವಾದ ಹೇಳ್ತಾನೆ, ಇದೆಲ್ಲ ದೇವರ ಭಿಕ್ಷೆ, ದೇವರ ಕೊಡುಗೆ ಅನ್ನುತ್ತಾನೆ. ಆದರೂ ಪರವಾಗಿಲ್ಲ. ಈಗ ಆ ಭಿಕ್ಷುಕನಿಗೆ ಯಾರು ನಿಜವಾದ ಉಪಕಾರಿ ಎಂಬುದನ್ನು ನಿರೂಪಿಸುವ ಸಮಯ ಬಂದಿದೆ. ಅವನಿಗೆ ಅರಿವು ಮಾಡಿಕೊಡುತ್ತೇನೆ' ಅಂದುಕೊಂಡ.

ಮರುದಿನ ಆ ಇಬ್ಬರು ಭಿಕ್ಷುಕರೂ ಎಂದಿನಂತೆ ಆಸ್ಥಾನಕ್ಕೆ ಬಂದಾಗ, ಮಾಮೂಲಿನಂತೆ ಭಿಕ್ಷೆಯನ್ನು ನೀಡಿ ಅವರಿಗೆ, 'ದಿನ ನಿತ್ಯ ಸಾಗುವ ಮಾರ್ಗದಲ್ಲಿ ಹೋಗುವ ಬದಲು ಈ ರಸ್ತೆಯಲ್ಲಿ ಹೋಗಿ' ಎಂದು ಹೆಚ್ಚು ಜನ ಓಡಾಡದ ಒಂದು ಸಣ್ಣ ರಸ್ತೆಯನ್ನು ತೋರಿಸಿ, ಆಜ್ಞೆ ಮಾಡಿದನು. ಅದರ ಜೊತೆಗೆ 'ಇಬ್ಬರೂ ಒಟ್ಟಾಗಿ ಹೋಗುವುದು ಬೇಡ, ಒಬ್ಬರ ನಂತರ ಸ್ವಲ್ಪ ಸಮಯ ಬಿಟ್ಟು ಮತ್ತೊಬ್ಬರು ಹೋಗಿ' ಎಂದು ಹೇಳಿದನು.

ರಾಜನ ಆಜ್ಞೆಯಂತೆ ಮೊದಲು ಯುವ ಭಿಕ್ಷುಕ ಆ ಸಣ್ಣದಾರಿಯಲ್ಲಿ ನಡೆದು ಹೋದ, ನಂತರದಲ್ಲಿ ಮುದುಕ ಆ ದಾರಿಯಲ್ಲಿ ಹಿಂದಿರುಗಿದ.

ಅದಕ್ಕೂ ಮೊದಲೇ ತನ್ನ ಆಸ್ಥಾನದ ಗೂಢಾಚಾರರಿಗೆ ಒಂದು ಚೀಲದ ಭರ್ತಿ ಚಿನ್ನದ ನಾಣ್ಯಗಳನ್ನು ತುಂಬಿ ರಸ್ತೆ ಮಧ್ಯ ಇಡಲು ಸೂಚಿಸಿದ್ದನು.

ರಾಜನ ಆಜ್ಞೆಯಂತೆ ಯುವ ಭಿಕ್ಷುಕ ಆ ದಾರಿಯಲ್ಲಿ ಹಾದುಹೋಗುವಾಗ ಅವನಿಗೆ ಒಂದು ಸಣ್ಣ ಸಂಶಯ ಬಂತು. 'ಯಾಕೆ ಮಹಾರಾಜರು ನನ್ನನ್ನು ಈ ದಾರಿಯಲ್ಲಿ ಹೋಗುವಂತೆ ಹೇಳಿದರು? ಈ ಜಾಗ ತುಂಬಾ ಪ್ರಶಾಂತವಾಗಿದೆ. ರಸ್ತೆಯ ಇಕ್ಕೆಲಗಳೂ ಗಿಡಮರಗಳಿಂದ ಸುಂದರವಾಗಿ ಕಂಗೊಳಿಸುತ್ತಿವೆ. ಬಹುಶಃ ದಯಾಳು ರಾಜ ನಾನು ಈ ಸೌಂದರ್ಯವನ್ನು ಆನಂದಿಸಲಿ ಎಂದಿರಬೇಕು! ಆಗಲಿ... ಈ ರಸ್ತೆಯ ಸೌಂದರ್ಯವನ್ನು ನನ್ನ ಕಣ್ಮುಚ್ಚಿಕೊಂಡೇ ಆಸ್ವಾದಿಸುವೆ' ಹೀಗೆಂದುಕೊಂಡು ಕಣ್ಮುಚ್ಚಿಕೊಂಡು ದಾರಿಯುದ್ದಕ್ಕೂ ನಡೆಯಲಾರಂಭಿಸಿದನು. ಹಾಗಾಗಿ ಅವನಿಗೆ ಮಾರ್ಗ ಮಧ್ಯದಲ್ಲಿ ಬಿದ್ದಿದ್ದ ಚಿನ್ನದ ನಾಣ್ಯದ ಚೀಲವನ್ನು ಗಮನಿಸಲಾಗಲಿಲ್ಲ.

ನಂತರ ಅದೇ ದಾರಿಯಲ್ಲಿ ಬಂದ ವೃದ್ಧ ಭಿಕ್ಷುಕನಿಗೆ ಆ ಚಿನ್ನದ ನಾಣ್ಯಗಳ ಗಂಟು ಕಾಣಿಸಿತು. ಅದನ್ನು